

# ಮುಚ್ಚಿಗೆಯ ಮುಚ್ಚಟೆ !

(38ನೇ ಪುಟದಿಂದ)
ಕಸುವು ದೊರೆತು ಸೊಂಪಾಗಿ ಬೆಳೆಯುತ್ತದೆ. ಈ ಕೆಳಗೆ ಅಂತಹ ಕೆಲವು ಪರಿಹಾರಗಳನ್ನು ಸೂಚಿಸಲಾಗಿದೆ.

**ಹಣ್ಣೆಲೆಯ ಮುಚ್ಚಿಗೆ:** ಉದುರಿದ ಹಣ್ಣೆಲೆಗಳನ್ನು ಒಂದೆಡೆ ರಾಶಿ ಹಾಕಿ ನೀರು ಚುಮುಕಿಸಿ ನಾಲ್ಕಾರು ದಿನಗಳಲ್ಲಿ ಕಳಿತ ಮೇಲೆ ದೊಡ್ಡ ಗಿಡಗಳಿಗೆ ಆಲಿ ಮಾಡಿ ತುಂಬಿಸಿ ನೀರು ಹಾಕಿ. ತೇವಾಂಶ ಬಹು ಕಾಲದವರೆಗೆ ಉಳಿದು-ಕೊಳ್ಳುತ್ತದೆ. ಮಾತ್ರವಲ್ಲ, ಎರಡು ಮೂರು ದಿನಗಳಿಗೊಮ್ಮೆ ನೀರು ಹಾಯಿಸಿದರೂ ಸಾಕಾಗುತ್ತದೆ. ಮಣ್ಣು ಬಿಗಿದು ಗಟ್ಟಿಯಾಗುವುದಿಲ್ಲ. ಹೆಚ್ಚಿನವರು ಒಣ ಎಲೆಗಳಿಗೆ ಬೆಂಕಿ ಹಚ್ಚುತ್ತಾರೆ. ಇದು ಆರೋಗ್ಯಕ್ಕೂ ಹಾನಿಕರ. ಸ್ವಲ್ಪ ಅಲಕ್ಷ್ಯವಾದರೆ ಸುತ್ತಮುತ್ತಲಿನ ಗಿಡಮರಗಳೂ ಸುಟ್ಟು ಹೋಗುತ್ತವೆ.

**ಜೀವಂತ ಮುಚ್ಚಿಗೆ:** ನೆಲದಲ್ಲಿ ಹಬ್ಬುವ ಜಾತಿಯ ಸಸ್ಯಗಳನ್ನು ದೊಡ್ಡ ಗಿಡಗಳಡಿಯಲ್ಲಿ ಬೆಳೆಸುವುದರಿಂದ ಕೈ ತೋಟದ ಅಂದ ಹೆಚ್ಚುತ್ತದೆ. ಮೇಲ್ಮಣ್ಣು ಸವಕಳಿಯಾಗುವುದಿಲ್ಲ. ಒಂದೆಲಗ, ಚಕ್ರಮುನಿ, ಪುದಿನಾ, ಗೋಳಿಸೊಪ್ಪಿನಂತಹ ಗಿಡಗಳನ್ನು ಜೀವಂತ ಮುಚ್ಚಿಗೆಯಾಗಿ ಬೆಳೆಸಿದರೆ, ಔಷಧಿಯಾಗಿಯೂ, ತರಕಾರಿಯಾಗಿಯೂ ಉಪಯುಕ್ತವೆನಿಸುತ್ತದೆ. ಆಗಾಗ ಅದನ್ನು ಕತ್ತರಿಸಿ ಬಳಸಿ. ಅತಿಯಾಗಿ ಹಬ್ಬಿ ಕೈ ತೋಟದ ಅಂದ ಹಾಳಾಗದಂತೆ ನೋಡಿಕೊಳ್ಳಿ.

**ಕಾಂಡಗಳಿಂದ ಹೊಸ ಗಿಡಗಳು:** ಕಾಂಡಗಳನ್ನು ನೆಟ್ಟು ಹೊಸ ಗಿಡ ತಯಾರಿಸುವುದು ಮಳೆಗಾಲದಲ್ಲಿ ಮಾತ್ರ ಸಾಧ್ಯ ಎನ್ನುವುದು ಹಲವರ ನಂಬುಗೆ. ಆದರೆ ಚಳಿಗಾಲದಲ್ಲಿಯೂ ಇಂತಹ ಗಿಡಗಳನ್ನು ತಯಾರಿಸಬಹುದು. ಮಣ್ಣು, ಕಾಂಪೋಸ್ಟ್, ಗೊಬ್ಬರ, ಉಸುಕನ್ನು ಸಮಪ್ರಮಾಣದಲ್ಲಿ ಬೆರೆಸಿ. ಪ್ಲಾಸ್ಟಿಕ್ ಲಕೋಟೆಗೆ ತುಂಬಿ. (ಹೆಚ್ಚಾದ ನೀರು ಬಸಿದು ಹೋಗುವಂತಿರಬೇಕು) ಕಾಂಡಗಳನ್ನು ನೆಟ್ಟು ಬುಡದಲ್ಲಿ ಗಾಳಿಯಾಡದಂತೆ ಗಟ್ಟಿ ಮಾಡಿ. ಪುಟ್ಟ ತಟ್ಟೆಗಳಲ್ಲಿ (ಒಂದಿಂಚು ನೀರು ನಿಲ್ಲಬೇಕು) ನೀರು ಹಾಕಿ ಗಿಡ ನೆಟ್ಟ ಲಕೋಟೆಯನ್ನಿರಿಸಿ ಮೇಲಿನಿಂದ ಒಂದು ಖಾಲಿ ಕವರನ್ನು ಮುಚ್ಚಿಗೆ ಹಾಕಿ. ಲಕೋಟೆಗೆ ಗಾಲಿ ಆಡಲು ಎರಡು ರಂಧ್ರ ಕೊರೆಯಿರಿ. ಬಹು ಬೇಗನೇ ಬೇರಿಳಿಸಿ ಚಿಗುರೊಡೆದು ಹೊಸ ಗಿಡ ತಯಾರಾಗುತ್ತದೆ.

**ಅತ್ಯುತ್ತಮ ಕಾಂಪೋಸ್ಟ್‌ಗೆ ಇದು ಸಕಾಲ:** ಚಳಿಗಾಲದಲ್ಲಿ ಹೇರಳವಾಗಿ ದೊರೆಯುವ ಒಣಗಿದ ಎಲೆಗಳನ್ನು ಒಂದು ಹಾಸು, ಮಣ್ಣು ಒಂದು ಹಾಸು, ಅಡುಗೆಮನೆಯ ಉಳಿಕೆಗಳನ್ನು ಒಂದು ಹಾಸು ಹಾಕುತ್ತಾ ಕೊಂಚ ನೀರು ಚಿಮುಕಿಸುತ್ತಾ ಇದ್ದರೆ ಚಳಿಗಾಲ ಮುಗಿಯುವ ಹೊತ್ತಿಗೆ ಚಹಾಪುಡಿಯಂತಹ ಅತ್ಯುತ್ತಮ ಕಾಂಪೋಸ್ಟ ತಯಾರಿಸಬಹುದು. ಈ ರೀತಿ ತಯಾರಿಸಿದ ಕಾಂಪೋಸ್ಟನ್ನು ಗಿಡಗಳಿಗೆ ಹಾಕಿದರೆ ಬಹುಕಾಲ ತೇವಾಂಶವನ್ನು ಹಿಡಿದಿಟ್ಟುಕೊಳ್ಳುತ್ತದೆ.

**ಬೂಸ್ಟ್ ರೋಗಕ್ಕೆ ಪರಿಹಾರ:** ರೋಗಬಾಧೆಗೀಡಾದ ಗಿಡಗಳಿಗೆ ಹುಳಿಮಜ್ಜಿಗೆಯನ್ನು ಚಿಮುಕಿಸಬಹುದು. ಅಥವಾ ಕಹಿಬೇವಿನ ಸೊಪ್ಪನ್ನು ನೀರಿನಲ್ಲಿ ಚೆನ್ನಾಗಿ ಕುದಿಸಿ ಆರಿದ ಮೇಲೆ ಗಿಡಗಳಿಗೆ ಸ್ಪ್ರೇ ಮಾಡಬಹುದು. ಅಥವಾ ನೀರು ಹಾಕಿದ ನಂತರ ಬೂದಿ ಸೋಕಬಹುದು. ಗೋಮೂತ್ರಕ್ಕೆ 1:6 ರ ಪ್ರಮಾಣದಲ್ಲಿ ನೀರು ಬೆರೆಸಿ ಸ್ಪ್ರೇ ಮಾಡಬಹುದು. ಇವಲ್ಲದೇ ನೀರು ಹಾಕುವಾಗ ಇಡೀ ಗಿಡವೂ ತೋಯುವಂತೆ ನಾಲ್ಕಾರು ದಿನ ನೀರು ಹಾಕಿದರೆ ರೋಗ ಹತೋಟಿಗೆ ಬರುತ್ತದೆ. ಈ ಉಪಾಯವನ್ನು ಪುಟ್ಟ ಗಿಡಗಳಿಗೆ ಮಾಡಬಹುದು. ದೊಡ್ಡ ಗಿಡಗಳಾದರೆ ರೋಗಗ್ರಸ್ತವಾದ ಕಾಂಡಗಳನ್ನು ಕತ್ತರಿಸಬೇಕು ಅಥವಾ ಎಲೆಗಳನ್ನು ಕಿತ್ತುಹಾಕಬೇಕು.

ಎಲೆ ಉದುರಿದಾಗಲೆಲ್ಲ ಕೊರಗುವ ಬದಲು ಅದನ್ನು ಗಿಡಗಳಿಗೆ ಮುಚ್ಚಿಗೆಯಾಗಿ ಬಳಸಿ ಗಿಡಗಳ ಮುಚ್ಚಟೆ ಮಾಡಿ. ತರಗೆಲೆಗಳನ್ನೂ ಪ್ರಕೃತಿಯ ವರದಾನ ಎಂದುಕೊಳ್ಳಿ.